**ವಿಜಯಗುರುಗಳಂತ್ರಿ ಕಮಲ**

ವಿಜಯಗುರುಗಳಂತ್ರಿ ಕಮಲ ಭಜನೆ ಮಾಡಿರೊ ||ಪ|

ಸುಜನಕೃತ ಜ್ಞಾನಾಧ್ವರ ಋತ್ವಿಜನ ಪಾಡಿರೋ ||ಅ.ಪ||

ವಿಜ್ಞಾನಪ್ರದ ಜ್ಞಾತವ್ಯ ಸುಜ್ಞಾನಖಣಿ ಅಜ್ಞಾನೋಗ್ರತಿಮಿರಾರ್ಕನುದ್ವಿಗ್ನ ಮುನಿಮಣಿ ಯಜ್ಞಮಗ್ನಾಭಿಜ್ಞ ಶ್ರೀಸರ್ವಜ್ಞ ಪ್ರಿಯವಾಣಿ ವಿಘ್ನಕಳೆದಲ್ಪಜ್ಞರ ಪಾಲಿಪ ಪ್ರಾಜ್ಞಾ ವರದಾನಿ ||೧

ಅಂಭೋರುಹ ಸಂಭವೋದ್ಭವಂಭೋಜ ಶೃಂಗ ಶಂಭು ಸರ್ವೋತ್ತಮಾ ಶಂಕಾರಂಭ ಮಾತಂಗ ಕಂಬುಗದಾ ಅಂಬುಜಾರಿ ಬಿಂಬ ಚಿನ್ನಾಂಗ ಬಿಂಬಕ್ರಿಯಾಭಾವಜ್ಞಾತ ಗುಂಭಾಂತರಂಗ ||೨||

ವಿಪ್ರಜಾತಿ ವಿಪುಳ ಖ್ಯಾತಿ ಕ್ಷಿಪ್ರಫಲದಾತ ಸುಪ್ರಾಸಾದವಾಣಿ ಅಮಿತ ಪ್ರಮತಿಯತಿ ಹಿತ ಅಪ್ರತೀಕಾವಲಂಬ ಶ್ರೀಶ ಸ್ವಾಪರೋಕ್ಷಿತ ಅಪ್ರಬುದ್ಧಪಾಲ ಕಾರುಣ್ಯಾಪ್ರಾಕಾಶಿತ ||೩||

ಕೀರ್ತಿತವ್ಯ ಕಾವ್ಯಾಚಾರ್ಯ ಸ್ಫೂರ್ತಿದಾಯಕ ತೀರ್ಥಕ್ಷೇತ್ರಾದ್ಯಟನ ಶೀಲ ಸಾರ್ಥಕಾಯಕ ಕಾರ್ಥಸ್ವರೇತ್ಯಾದಿ ಕಾಷ್ಟ ಕೃಷ್ಣವರ್ತ್ಮಕ ಪಾರ್ಥಮಿತ್ರ ಸ್ತೋತ್ರರತಿ ಪುಷ್ಟ ಸಾಯಕ ||೪||

ದ್ವಂದ್ವಾತೀತ ಬಂಧುರಾತ್ಮ ನಂದ ತುಂದಿಲ ಸಂದರ್ಶನಾ ದೇವ ಪುನಂತಿ ವಿಗತವಿಹ್ವಲ ಮಂದಾತ್ಮನಾಗಿರಲೇನಿವರ ನಂಬಲನುಗಾಲ ಮುಂದೆ ಕುಣಿವ ತಂದೆ ವೆಂಕಟೇಶ ವಿಠಲ ||೫|